# ಕನ್ನಡ ಸಾಹಿತ್ಯಕ್ಕೆ ಬಿ.ಎಲ್. ರೈಸ್‌ರ ಕೊಡುಗೆ
## [1837–1927]

**ಶರ್ಮಿಳಾ. ವಿ.ಎನ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನಾಗಮಂಗಲ

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ವೆ.ಎನೆಶರೆಮೆಳಾ. “ಕನೆನಡ ಸಾಹೆತೆಯಕೆಕೆ ಬೆ.ಎಲ. ರ◌ೈಸೆರ ಕ◌ೊಡುಗೆ [1837-1927].” *Shanlax International Journal of Arts, Science and Humanities*, vol. 12, no. S1, 2024, pp. 230–33.

DOI:
https://doi.org/10.34293/sijash.v12iS1-Oct.8311

19ನೇ ಶತಮಾನದಲ್ಲಿ ಕನ್ನಡ ಸಂಶೋಧನೆಯ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ ಪಾಶ್ಚಾತ್ಯ ವಿದ್ವಾಂಸರಲ್ಲಿ ಬಿ.ಎಲ್.ರೈಸ್ ರು ಮೊದಲಿಗರ ಸಾಲಿನಲ್ಲಿ ಒಬ್ಬರಾಗಿ ನಿಲ್ಲುತ್ತಾರೆ.

‘ಬಿಳಿಯ ಕನ್ನಡಿಗ’ ಎಂದೇ ಹೆಸರು ಪಡೆದಿರುವ ಬೆಂಜಿಮಿನ್ ಲೂಯಿ ರೈಸ್ ಮೂಲತಃ ಇಂಗ್ಲೆಂಡ್ ದೇಶದವರಾದರೂ ಹುಟ್ಟಿದ್ದು ಬೆಂಗಳೂರಿನಲ್ಲಿಯೇ ಇವರ ತಂದೆ ಬೆಂಜಿಮಿನ್ ರೈಸ್ ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಈಸ್ ಪರೇಡ್ ಚರ್ಚ್‌ನಲ್ಲಿ ಧರ್ಮ ಬೋಧಕರಾಗಿದ್ದು ಸಂಸಾರ ಸಮೇತ ಬೆಂಗಳೂರಿನಲ್ಲಿಯೆ ವಾಸವಾಗಿದ್ದರು. ಇವರ ಐದನೇಯ ಮಗನೇ ಬಿ.ಎಲ್.ರೈಸ್ ಇವರ ಪ್ರಾಥಮಿಕ ಶಿಕ್ಷಣ ಬೆಂಗಳೂರಿನಲ್ಲಿಯೇ ನಡೆದಿದ್ದು ನಂತರ ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹೋಗುತ್ತಾರೆ. ನಂತರ ಮತ್ತೇ ಉದ್ಯೋಗಕ್ಕಾಗಿ 1860 ರಲ್ಲಿ ಬೆಂಗಳೂರಿಗೆ ಬಂದು ನಂತರ ಮೈಸೂರು ರಾಜ್ಯ ಶಿಕ್ಷಣ ಇಲಾಖೆಯಲ್ಲಿ ಉದ್ಯೋಗ ಮಾಡಲು ಆರಂಭಿಸುತ್ತಾರೆ.

ಮೊದಲಿಗೆ ಬಿ.ಎಲ್.ರೈಸ್‌ರು ಶಾಲಾ ಪರಿವೀಕ್ಷಣಾಧಿಕಾರಿಯಾಗಿದ್ದು ಅಲ್ಲಿ ಅವರು ಅನೇಕ ಹೊಸ ರೀತಿಯ ಮಾದರಿಗಳನ್ನು ಅನುಸರಿಸಿ ಶಾಲಾ ವ್ಯವಸ್ಥೆಯನ್ನು ರೂಪಿಸುತ್ತಾರೆ, ಹೀಗೆ ಶಾಲಾ ಪರಿವೀಕ್ಷಣೆಗೆಂದು ಮೈಸೂರು ಮತ್ತು ಕೊಡಗನ್ನು ಸುತ್ತುತ್ತಿದ್ದರಿಂದ ಇಲ್ಲಿನ ಸಾಂಸ್ಕೃತಿಕ, ಸಾಮಾಜಿಕ, ಮತ್ತು ಸಾಹಿತ್ಯದ ಪರಿಚಯ ಅವರಿಗಾಗುತ್ತದೆ. ಜೊತೆಗೆ ಕನ್ನಡ ಭಾಷಾ ಸಂಪತ್ತಿನ ಬಗ್ಗೆ ಅರಿವು ಪಡೆಯಲು ಕನ್ನಡ ಪಾಠವನ್ನು ಕೂಡ ಹೇಳಿಸಿಕೊಳ್ಳುತ್ತಿದ್ದರಂತೆ. ಹೀಗೆ ರೈಸ್‌ರಿಗೆ ಕನ್ನಡ ಭಾಷೆಯ ಬಗ್ಗೆ ಆಳವಾದ ಜ್ಞಾನವಿತ್ತು ನಂತರ ವಿದ್ಯಾಭ್ಯಾಸದ ಇಲಾಖೆಯ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸುತ್ತಾರೆ.

ಹೀಗೆ ಬಿ.ಎಲ್.ರೈಸ್‌ರವರು ಶಿಕ್ಷಣ ರಂಗದಲ್ಲಿ ದುಡಿದಿದ್ದರಿಂದ ಅವರಿಗೆ ಕನ್ನಡ ನಾಡಿನ ನಾಡು–ನುಡಿ–ಇತಿಹಾಸ–ಸಾಹಿತ್ಯದ ಬಗ್ಗೆ ಆಸಕ್ತಿ ಉಂಟಾಗಿ ಆ ವಿಷಯಗಳಿಗೆ ಸಂಬಂದಿಸಿದಂತೆ ಇಲಾಖೆಯ ಕೆಲಸಗಳನ್ನು ಕೈಗೊಂಡು ಕನ್ನಡ ನಾಡಿಗೆ ಅಮೋಘ ಸೇವೆಯನ್ನು ಸಲ್ಲಿಸಿದ್ದಾರೆ, ಅವುಗಳಲ್ಲಿ ಪ್ರಮುಖವಾಗಿರುವುದನ್ನು ಮಾತ್ರ ಇಲ್ಲಿ ವಿವರಿಸಲಾಗಿದ್ದು ಅವು ಈ ಕೆಳಕಂಡಂತಿವೆ.

### ಶಾಸನಗಳ ಪಿತಾಮಹ ಬಿ.ಎಲ್.ರೈಸ್

ಸುಮಾರು 1500 ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದ ಬೇರುಗಳನ್ನು ಹುಡುಕುತ್ತ ಹೋದರೆ ಅವುಗಳ ಮೂಲ ನಮಗೆ ಶಾಸನಗಳಲ್ಲಿ ಸಿಗುತ್ತದೆ. ಶಾಸನಗಳೆಂದರೆ ಒಂದು ಕಾಲದ ಮಹತ್ವದ ವಿಷಯ ತಿಳಿಯಲು ಆ ವಿಷಯ ಬಹುಕಾಲ ಉಳಿಯಲು ಅದು ಎಲ್ಲರಿಗೂ ತಲುಪಲು ಒಂದು ಗಟ್ಟಿಮುಟ್ಟಾದ ಬಂಡೆಯ ಮೇಲೇ ಶಿಲೆಯ ಮೇಲೇ ಅಥವಾ, ಲೊಹದ ತಾಮ್ರ ಪಟಗಳನ್ನು ಆಯ್ದುಕೊಂಡು ಅದರ ಮೇಲೆ ವಿಷಯಗಳನ್ನು ಕೆತ್ತಿಸುತ್ತಿದ್ದರು. ಇವುಗಳೇ ಶಾಸನಗಳು. ಇಂದು ಆ ಶಾಸನಗಳೇ ನಮ್ಮ ಸಾಹಿತ್ಯ, ಸಂಸ್ಕೃತಿ, ಇತಿಹಾಸ ತಿಳಿಯಲು ಪ್ರಮುಖ ಆಕರಗಳಾಗಿವೆ, ಆದರೆ ಕಾಲಕ್ರಮೇಣ ಈ ಶಾಸನಗಳು ಮಳೆ–ಗಾಳಿ–ಬಿಸಿಲಿಗೆ ಮುರಿದುಬಿದ್ದೋ, ಹಾಳಾಗಿಯೊ, ನಾಶವಾದರೆ, ಮತ್ತೇ ಕೆಲವುಗಳನ್ನ ಜನರು ಉಪಯೋಗಕ್ಕೆ ಬಾರದ ಕಲ್ಲುಗಳೆಂದು ತಿಳಿದು ತಮ್ಮ ಮನೆಗಳಿಗೆ ಬಳಸಿಕೊಳ್ಳುತ್ತಿದ್ದರು. ಹೀಗೆ ಶಾಸನಗಳು ತಮ್ಮ ನಿಜಸ್ವರೂಪ ಕಳೆದುಕೊಂಡಿದ್ದವು ಮತ್ತು ಇನ್ನು ಕೆಲವು ಶಾಸನಗಳು ದೇವರ ಸ್ಥಾನ ಪಡೆದು ದೇವಸ್ಥಾನದ ಗರ್ಭಗುಡಿಯಲ್ಲಿ ಪ್ರವೇಶ ಪಡೆದಿದ್ದವು.

ಆದರೆ ಭಾರತಕ್ಕೆ ಬ್ರಿಟೀಷರು ಬಂದಾಗ ಭಾರತದ ಪರಂಪರೆ, ಇತಿಹಾಸ ಪರಂಪರೆ ಬಗ್ಗೆ ಆಸಕ್ತಿಯಿದ್ದು ಇದರ ಹುಡುಕಾಟಕ್ಕಾಗಿ ಶಾಸನಗಳ ಬೆನ್ನು ಹತ್ತಿದರು. ಅದೇ ರೀತಿ

ಕರ್ನಾಟಕದಲ್ಲಿಯೂ 1971 ರಿಂದ ಶಾಸನಗಳ ಅಧ್ಯಯನ ಶುರುವಾಗುತ್ತದೆ. ಇದನ್ನು ಆರಂಭಿಸಿದವರು ಕೂಡ ಪಾಶ್ಚಾತ್ಯರೇ ಆಗಿದ್ದಾರೆ.

ಡಾ.ಎಂ.ಎಂ.ಕಲಬುರ್ಗಿಯವರು ಶಾಸನಗಳ ಅಧ್ಯಯನದ ಇತಿಹಾಸವನ್ನು ಮೂರು ಭಾಗಗಳಾಗಿ ವಿಭಾಗಿಸುತ್ತಾರೆ. ಅವುಗಳೆಂದರೆ.

1. ಕರ್ನಲ್ ಮೆಕೆಂಜೆ ಯುಗ – 1791–1837
2. ಸರ್ ವಾಲ್ಟರ್ ಎಲಿಯುಟ್ ಯುಗ – 1837–1870
3. ಡಾ.ಫ್ಲೀಟ್ ಮತ್ತು ರೈಸ್ ಯುಗ – 1870 ರ ನಂತರದ ಕಾಲ.

ಕರ್ನಲ್ ಮೆಕೆಂಝಿಯ ಶಾಸನಗಳ ಕೆಲಸದ ಬಗೆಗೆ ಡಾ.ಶ್ರೀನಿವಾಸ ಹಾವನೂರರು ಈ ರೀತಿ ಅಭಿಪ್ರಾಯಪಡುತ್ತಾರೆ.

"ಮೆಕೆಂಝಿಯು ಪರಿವೀಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುವಾಗ ದಕ್ಷಿಣ ಭಾರತದಲ್ಲಿ 40 ಸಾವಿರ ಮೈಲು ಸಂಚಾರ ಮಾಡಿದನೆಂತಲೂ ದಕ್ಷಿಣ ಭಾರತದ ಶಾಸನ, ಹಸ್ತಪ್ರತಿ ಹಾಗೂ ಪುರಾತನ ವಸ್ತುಗಳನ್ನು ಜೊತೆಗೆ ಐತಿಹ್ಯ ಸ್ಥಳ ಪುರಾಣ ಮೊದಲಾದವುಗಳನ್ನು ಕಲೆ ಹಾಕಿದರು"1.

ನಂತರ ಬಂದ ವಾಲ್ಟರ್ ಎಲಿಯಟ್ ಕೂಡ ಶಾಸನಗಳ ಬಗ್ಗೆ ಸವಿವರವಾಗಿ ಸಂಶೋಧನೆ ನಡೆಸುತ್ತಾರೆ. "ಕರ್ನಾಟಕದ ಶಾಸನಗಳಿಂದ ಹೊರಡುವ ಇತಿಹಾಸದ ಒಂದೊಂದೆ ಎಳೆಗಳನ್ನು ಬಿಡಿಸಿ ಜೋಡಿಸಿ ನೇಯುವ ಪರಿಶ್ರಮದ ಕೆಲಸವನ್ನು ಎಲಿಯಟ್ ಕೈಗೊಂಡನು"2. ಎಂದು ಶ್ರೀನಿವಾಸ ಹಾವನೂರರು ತಿಳಿಸುತ್ತಾರೆ.

ಅನಂತರ ಫ್ಲೀಟರು ಕೂಡ ಶಾಸನಗಳ ಮೇಲೆ ಹಲವಾರು ಸಂಶೋಧನೆಗಳನ್ನು ಕೈಗೊಳ್ಳುತ್ತಾರೆ. ಇದಾದ ಮೇಲೆ ಬಂದ ಬಿ.ಎಲ್.ರೈಸ್‌ರು ಒಂದು ವಿಶ್ವವಿದ್ಯಾನಿಲಯ ಮಾಡಲಾಗದ ಕೆಲಸವನ್ನು ಶಾಸನಗಳ ಅಧ್ಯಯನದಲ್ಲಿ ಮಾಡುತ್ತಾರೆ. ಕರ್ನಾಟಕದ ಇತಿಹಾಸ ಮತ್ತು ಸಾಹಿತ್ಯವನ್ನು ಕಟ್ಟಿಕೊಡುವ ಹಲವಾರು ಶಾಸನಗಳನ್ನು ಕಂಡುಹಿಡಿದು ಅವುಗಳನ್ನು ಓದಿ ಅಧ್ಯಯನ ಮಾಡುತ್ತಾರೆ.

ಮೊದಲಿಗೆ 'ಇಂಡಿಯನ್ ಆಂಟಿಕ್ವೈರಿ' ಎಂಬ ಪತ್ರಿಕೆಗೆ ಏಳು ಲೇಖನಗಳನ್ನು ಬರೆಯುತ್ತಾರೆ ನಂತರ ಮೈಸೂರು ಇನ್‌ಸ್ಕ್ರಿಪ್ಷನ್ಸ್ (ಒಥಿಠಡಿಜ ಂಟಿಛಿಡಿಖಿಠಿಣಖಿಠಟಿ) ಎಂಬ ಕೃತಿ ಸಿದ್ಧಪಡಿಸಿ ಇದರಲ್ಲಿ ಸುಮಾರು 75 ಶಾಸನಗಳ ಅಧ್ಯಯನ ಮಾಡಿರುತ್ತಾರೆ. ಕೊನೆಯಲ್ಲಿ 'ಎಫಿಗ್ರಾಫಿಯ ಕರ್ನಾಟಕ' ಎಂಬ ಒಟ್ಟು 12 ಸಂಪುಟಗಳಲ್ಲಿ, 12 ಜಿಲ್ಲೆಗಳ, 9000 ಶಾಸನಗಳ ಅಧ್ಯಯನ ಮಾಡಿ ತಮ್ಮ ಜೀವಮಾನದ ಶ್ರೇಷ್ಠ ಸಂಪುಟಗಳನ್ನು ಹೊರತರುತ್ತಾರೆ.

ಈ ಹನ್ನೆರಡು ಸಂಪುಟಗಳಲ್ಲಿ ಒಂದೊಂದು ಸಂಪುಟವು ಒಂದೊಂದು ಜಿಲ್ಲೆಗೆ ಸಂಬಂಧಿಸಿದ್ದಾಗಿದ್ದು ಹನ್ನೆರಡು ಜಿಲ್ಲೆಗಳನ್ನು ಪ್ರತ್ಯೇಕವಾಗಿ ವಿಭಾಗಿಸಿದ್ದಾರೆ. ಆ ಜಿಲ್ಲೆಗಳೆಂದರೆ ಕೊಡಗು, ಶ್ರವಣಬೆಳಗೊಳ, ಮೈಸೂರು(1), ಮೈಸೂರು(2), ಹಾಸನ, ಕಡೂರು, ಶಿವಮೊಗ್ಗ(1), ಶಿವಮೊಗ್ಗ(2), ಬೆಂಗಳೂರು, ಕೋಲಾರ, ಚಿತಲದುರ್ಗ (ಚಿತ್ರದುರ್ಗ) ಮತ್ತು ತುಮಕೂರು.

ಇದಲ್ಲದೆ ಶಾಸನಗಳನ್ನು ಹಲವಾರು ವಿಧಗಳಾಗಿಯು ವಿಂಗಡಿಸುತ್ತಾರೆ. ಉದಾಹರಣೆಗೆ ದಾನದ ಶಾಸನಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಧಾರ್ಮಿಕ ಶಾಸನಗಳು...ಇತ್ಯಾದಿ.

'ಎಫಿಗ್ರಾಫಿಯಾ ಕರ್ನಾಟಕ' ಸಂಪುಟಗಳ ರೂಪುರೇಷೆಗಳು ಒಂದು ಕ್ರಮಬದ್ಧವಾಗಿದ್ದು ಮೊದಲಿಗೆ ಮುನ್ನುರಿ, ಆಯಾ ಸಂಪುಟದಲ್ಲಿ ಪ್ರಕಟವಾಗಿರುವ ಚಿತ್ರಗಳ ಪಟ್ಟಿ, ಪ್ರಸ್ತಾವನೆ, ಶಾಸನಗಳನ್ನು ಹಾಕಿಸಿದ ರಾಜವಂಶ, ತಾಲ್ಲೂಕು ಮತ್ತು ಶಾಸನದ ಕ್ರಮಸಂಖ್ಯೆಗಳು, ಶಾಸನಗಳ ಜೋಡಣೆ, ಅನುಬಂಧ– ಹೀಗೆ ಸಂಪುಟಗಳ ರಚನೆ ಮಾಡಿ ಕನ್ನಡ, ಕರ್ನಾಟಕಕ್ಕೆ ಒಂದು ಶ್ರೇಷ್ಠ ಕೊಡುಗೆ ನೀಡಿದ್ದಾರೆ.

ಶಾಸನಗಳ ಬಗ್ಗೆ ಬಿ.ಎಲ್.ರೈಸ್‌ರು ಕಂಡುಹಿಡಿದ ಅತಿ ಮುಖ್ಯವಾದ ಶಾಸನವೆಂದರೆ ಶ್ರವಣಬೆಳಗೊಳ ಶಾಸನ. ಇದು ನಮ್ಮ ನಾಡಿನ ಇತಿಹಾಸದ ಅತಿ ಪ್ರಾಚೀನ ಘಟನೆಗೆ ಸಾಕ್ಷಿಯಾಗಿದೆ. ಈ ಶಾಸನದಲ್ಲಿ ಮೌರ್ಯರ ಚಂದ್ರಗುಪ್ತ ಮತ್ತು ಭದ್ರಬಾಹು ಇವರು ಶ್ರವಣ ಬೆಳಗೊಳಕ್ಕೆ ಬಂದು ವಾಸವಾಗಿದ್ದರು ಎಂಬುದನ್ನು ನಿರೂಪಿಸುತ್ತದೆ. ಇದರಿಂದ ಕರ್ನಾಟಕದ ಇತಿಹಾಸವನ್ನು ತಿಳಿಯಲು ಸಹಾಯಕವಾಗುತ್ತದೆ. ಇದಲ್ಲದೆ ಅಶೋಕನ ಬ್ರಹ್ಮಗಿರಿ ಶಾಸನ, ಬನವಾಸಿಯ ತಾಳಗುಂದದ ಸ್ತಂಭ ಮುಂತಾದವು ತುಂಬಾ ಮಹತ್ವದ ಶಾಸನಗಳಾಗಿವೆ.

ಶಾಸನಗಳನ್ನು ಸಿದ್ದಪಡಿಸುವ ಬಗ್ಗೆ ಮತ್ತು ಅದರಲ್ಲಿರುವ ಭಾಷೆ ಮತ್ತು ವಿಷಯಗಳ ಬಗ್ಗೆ ಬಿ.ಎಲ್.ರೈಸ್‌ರ ಕಾರ್ಯವನ್ನು ಕೆಲವು ವಿದ್ವಾಂಸರು ಮತ್ತು ಕೆಲವು ಜನಸಾಮಾನ್ಯರು ಟೀಕಿಸಿ ಇದೆಲ್ಲವನ್ನು ದೇಶೀಯ ಸಂಶೋಧಕರೇ ಓದಿ ರಚಿಸಿರುವುದು ಎಂದು ಆಪಾದಿಸುತ್ತಾರೆ. ಆದರೆ ಇದು ಅಪ್ಪಟ ಸುಳ್ಳು. ಏಕೆಂದರೆ ಸ್ವತಃ ಬಿ.ಎಲ್.ರೈಸ್‌ರೇ ಕನ್ನಡ ಭಾಷೆಯನ್ನು ಚೆನ್ನಾಗಿ ಕಲಿತಿದ್ದರು ಮತ್ತು ಶಾಸನಗಳನ್ನು ಓದಬಲ್ಲವರಾಗಿದ್ದರು. ಆದ್ದರಿಂದಲೇ ಚಿದಾನಂದಮೂರ್ತಿಯವರು "ದೇಶೀಯ ವಿದ್ವಾಂಸರ ಸಹಾಯ ಏನಿದ್ದರೂ ಭಾಷೆಯ ವಿಷಯದಲ್ಲಿ, ಲಿಪಿಯನ್ನು ಓದುವುದರಲ್ಲಿ ಪಾಶ್ಚಾತ್ಯ ವಿದ್ವಾಂಸರ ಪ್ರಯತ್ನವೇ ಮುಖ್ಯವಾದದು"3. ಎಂಬ ಅಭಿಪ್ರಾಯ ಸತ್ಯವಾಗಿದೆ.

ನಂತರ ಆರ್.ನರಸಿಂಹಾಚಾರ್ಯರಂತಹ ಪ್ರತಿಭಾನ್ವಿತರು ಇದರ ಸಹಾಯಕ್ಕೆ ನಿಲ್ಲುತ್ತಾರೆ. ಜೊತೆಗೆ ಇವರ ಸಹಾಯವಿಲ್ಲದೆ ತಾವೇ ಖುದ್ದಾಗಿ ಶಾಸನಗಳನ್ನು ಬಿ.ಎಲ್.ರೈಸ್‌ರೇ ಓದುತ್ತಿದ್ದರು.

ಬಿ.ಎಲ್.ರೈಸ್‌ರ ಈ ಸಾಧನೆಯು ಕರ್ನಾಟಕದ ವಿದ್ವಾಂಸರ ಮೇಲೂ ಪ್ರಭಾವ ಬೀರಿದ್ದು ನಂತರದಲ್ಲಿ ಹಲವಾರು ಕನ್ನಡಿಗರು ಶಾಸನಗಳ ಸಂಶೋಧನೆಯಲ್ಲಿ ತೊಡಗಿ ಕನ್ನಡ ಸಾಹಿತ್ಯ ಮತ್ತು ಇತಿಹಾಸಕ್ಕೆ ಅತ್ಯಮೂಲ್ಯವಾದ ಕೊಡುಗೆಗಳನ್ನು ನೀಡಿದ್ದಾರೆ. ಅವರಲ್ಲಿ ಪ್ರಮುಖರಾದವರೆಂದರೆ ಆರ್.ನರಸಿಂಹಾಚಾರ್, ಡಾ.ಎಂ.ಎಚ್.ಕೃಷ್ಣ, ಡಾ.ಎಂ. ಚಿದಾನಂದಮೂರ್ತಿ, ಡಾ.ಎಂ. ಎಂ.ಕಲಬುರ್ಗಿ...ಇತ್ಯಾದಿ.

ಇದಿಷ್ಟೆ ಅಲ್ಲದೆ ಶಾಸನಗಳ ಸಂರಕ್ಷಣೆಯ ಬಗ್ಗೆ ಬಿ.ಎಲ್.ರೈಸ್‌ರು ಕಾಳಜಿ ಹೊಂದಿದ್ದು ಅವುಗಳ ಸಂರಕ್ಷಣೆ ತುಂಬಾ ಮುಖ್ಯ ಎಂದು ಪರಿಭಾವಿಸಿದ್ದರು. ಶ್ರವಣಬೆಳಗೊಳದ ಶಾಸನದ ದುರ್ಗತಿಯ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದಿದ್ದು ಅವರ ಪತ್ರದ ಆಧಾರದ ಮೇಲೆ ಶ್ರವಣಬೆಳಗೊಳಕ್ಕೆ ರಕ್ಷಣೆ ಒದಗಿಸಲಾಯಿತು. ಇದೇ ರೀತಿ ಇನ್ನು ಹಲವಾರು ಶಾಸನಗಳ ರಕ್ಷಣೆ ಮಾಡಿದ್ದಾರೆ.

ಈ ಎಲ್ಲ ಸಂಶೋಧನೆಗಳಿಂದ 'ಶಾಸನದ ಪಿತಾಮಹ ಬಿ.ಎಲ್.ರೈಸ್' ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ.

**ಗ್ರಂಥ ಸಂಪಾದನೆಗೆ ಬಿ.ಎಲ್.ರೈಸ್ ರ ಕೊಡುಗೆ**

ಕನ್ನಡ ಸಾಹಿತ್ಯಕ್ಕೆ ಸುಮಾರು 1500 ವರ್ಷಗಳ ಇತಿಹಾಸವಿದ್ದು ಇದರಲಿ ಅಗಾಧ ಸಾಹಿತ್ಯ ರಾಶಿಯೆ ಅಡಗಿ ಕೂತಿದೆ. ಆ ಕಾಲದಲ್ಲಿ ಸಾಹಿತ್ಯವನ್ನು ಭೂರ್ಜಪತ್ರ, ಕಡತ, ಕೊರಕಾಗಜದ ಮೇಲೆ ಬರೆಯುತ್ತಿದ್ದರು. ಇವುಗಳನ್ನು ಹಸ್ತ ಪ್ರತಿಗಳು ಎಂದು ಕರೆಯುತ್ತಾರೆ. ಜೊತೆಗೆ ಕಾವ್ಯಗಳನ್ನು ಕಡತದಲ್ಲಿ ಬರೆಯುತ್ತಿದ್ದರು.

ಆದ್ದರಿಂದ ಒಂದು ಗ್ರಂಥ ಸಂಪಾದನೆ ಮಾಡಬೇಕೆಂದರೆ ಮೊದಲು ಹಸ್ತ ಪ್ರತಿಗಳನ್ನು ಹುಡುಕಬೇಕು. ನಂತರ ಸಂಗ್ರಹಿಸಿದ ಹಸ್ತ ಪ್ರತಿಗಳನ್ನು ವರ್ಗೀಕರಣ, ಪಾಠ ಪರಿಷ್ಕರಣ ಮಾಡಬೇಕು ಏಕೆಂದರೆ ಒಂದೇ ಕೃತಿಯ 2–3 ಹಸ್ತ ಪ್ರತಿಗಳು ಸಿಕ್ಕಾಗ ಅವುಗಳ ಪರಿಷ್ಕರಣೆ ಮಾಡಬೇಕಾಗುತ್ತದೆ. ಆಗ ಅದು ಒಂದು ಗ್ರಂಥರೂಪವಾಗಿ ಸಿದ್ದವಾಗುತ್ತದೆ. ಗ್ರಂಥ ಸಂಪಾದನೆ ಮತ್ತು ಹಸ್ತ ಪ್ರತಿ ಸಂಪಾದನೆ ಎಂದರೂ ಒಂದೇ ಅರ್ಥವಾಗುತ್ತದೆ.

ಆದ್ದರಿಂದ ಕನ್ನಡದ ಆದಿ ಕೃತಿಗಳನ್ನು ಸಂಪಾದಿಸುವಾಗ ಗ್ರಂಥ ಸಂಪಾದನೆಯ ಕೆಲಸ ಅನಿವಾರ್ಯ ಮತ್ತು ಅಗತ್ಯವು ಹೌದು.

ಇಷ್ಟೊಂದು ಅಗಾಧ ಸಾಹಿತ್ಯವಿದ್ದರೂ ಕನ್ನಡನಾಡಿನಲ್ಲಿ ಅದನ್ನು ಹುಡುಕಿ ಸಂಸ್ಕರಿಸುವ ಕಾರ್ಯವನ್ನು ಯಾರು ಮಾಡಿರುವುದಿಲ್ಲ. ಈ ಕೆಲಸವನ್ನು ಪಾಶ್ಚಾತ್ಯರು ಮಾಡಿರುತ್ತಾರೆ, ಅವರಲ್ಲಿ ಪ್ರಮುಖರಾದವರೆಂದರೆ ಬಿ.ಎಲ್.ರೈಸ್‌ರು. ಇವರು ಶಾಸನಗಳನ್ನು ಹುಡುಕುವಾಗ ಹಲವಾರು ಹಸ್ತ ಪ್ರತಿಗಳು ದೊರೆಯುತ್ತವೆ, ಆಗ ಅವುಗಳ ಬಗ್ಗೆ ಆಸಕ್ತಿ ಬೆಳೆದು ಹಸ್ತ ಪ್ರತಿ ಸಂಪಾದನೆಗೆ ಭದ್ರವಾದ ಅಡಿಪಾಯವನ್ನು ಹಾಕಿಕೊಡುತ್ತಾರೆ.

ಕನ್ನಡದ ಮೊತ್ತ ಮೊದಲ ಕಾವ್ಯವೆನಿಸಿದ 'ಕವಿರಾಜಮಾರ್ಗ'ದ ಹಸ್ತಪ್ರತಿಯನ್ನು ರೈಸ್‌ರೇ ಕಂಡುಹಿಡಿದಿದ್ದ ನಂತರ ಇದನ್ನು 'ಬಬ್ಲಿಯಾಟಿಕಾ ಕರ್ನಾಟಕ' ಮಾಲಿಕೆಯಲ್ಲಿ ಪ್ರಕಟಿಸುತ್ತಾರೆ.

ಮೊದಲಿಗೆ ರೈಸ್ ಅವರು ಮೂರು ಪ್ರಮುಖ ಕೃತಿಗಳನ್ನು ಸಂಪಾದಿಸುತ್ತಾರೆ. ಅವುಗಳೆಂದರೆ ಸಂಸ್ಕೃತ ಕೃತಿ 'ತಿರುನಗರಿ ರಾಮಾನುಜಯ್ಯನ ರಾಮಾಯಣ ಸಂಗ್ರಹ; ಪ್ರಾಚೀನ ಕನ್ನಡ ಕವಿಗಳ ಪದ್ಯಗಳ ಸಂಗ್ರಹ' ಪದ್ಯಸಾರ ಮತ್ತು ಅಮರಸಿಂಹನ "ನಾಮಲಿಂಗಾನು ಶಾಸನ" (ಅಮರಕೋಶ)

ಬಬ್ಲಿಯಾಟಿಕ ಕರ್ನಾಟಿಕಾ:– ನಂತರ ಕನ್ನಡದ ಪ್ರಮುಖ ಮತ್ತು ಪ್ರಾಚೀನ ಕೃತಿಗಳನ್ನು ಪರಿಷ್ಕರಿಸಿ ಮುದ್ರಿಸುವುದಕ್ಕಾಗಿ "ಬಬ್ಲಿಯಾಟಿಕಾ ಕರ್ನಾಟಿಕಾ" ಎಂಬ ಗ್ರಂಥಮಾಲೆಯನ್ನು ಆರಂಭಿಸುತ್ತಾರೆ. ಇದರಲ್ಲಿ ಇವರು ಪ್ರಮುಖವಾಗಿ ನಾಲ್ಕು ಕೃತಿಗಳನ್ನು ಸಂಪಾದಿಸುತ್ತಾರೆ. ಅವುಗಳೆಂದರೆ–

**1. ಕರ್ನಾಟಕ ಭಾಷಭೂಷಣಂ (1884) – 2 ನೇ ನಾಗವರ್ಮ**

ಬಿ.ಎಲ್.ರೈಸ್‌ರು ಸಂಪಾದಿಸಿದ ಶಾಸ್ತ್ರಗ್ರಂಥಗಳಲ್ಲಿ ಇದು ಮೊದಲನೆಯದಾಗಿದೆ ಇದಕ್ಕಾಗಿ ಇವರು ಮೂರು ತಾಡೋಲೆಗಳ ಮೇಲೆ ಬರೆದಿರುವ ಹಸ್ತಪ್ರತಿಗಳನ್ನು ಎ.ಬಿ.ಸಿ. ಎಂದು ವಿಭಾಗ ಮಾಡಿಕೊಂಡು ಮೂರು ಹಸ್ತ ಪ್ರತಿಗಳನ್ನು ಅದ್ಯಯನ ಮಾಡಿ ಕೊನೆಯಲ್ಲಿ ಆ ಮೂರು ತಾಡೋಲೆಗಳು ಶುದ್ದ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

**2. ಕರ್ನಾಟಕ ಶಬ್ದಾನು ಶಾಸನ – ಭಟ್ಟಾಕಳಂಕ.**

ಇದು ಸಂಸ್ಕೃತ ಕೃತಿಯಾಗಿದ್ದು ವಿಷಯ ಮಾತ್ರ ಕನ್ನಡ ವ್ಯಾಕರಣವನ್ನು ಕುರಿತಾಗಿದ್ದಾಗಿದೆ. ಈ ಕೃತಿಯನ್ನು ಮೊತ್ತ ಮೊದಲಿಗೆ ಪರಿಚಯಿಸಿದ್ದು ಬಿ.ಎಲ್.ರೈಸ್‌ರೇ.

**3. ಪಂಪ ರಾಮಾಯಣ:– ನಾಗಚಂದ್ರ**

ಪಂಪ ರಾಮಾಯಣದ ಮೂರು ಓಲೆಗರಿಗಳ ಹಸ್ತ ಪ್ರತಿಗಳು ಮೊದಲು ದೊರಕಿದ್ದು ಕಿಟಿಲ್ ಅವರಿಗೆ, ಅವರು ಇದನ್ನು ಬಿ.ಎಲ್.ರೈಸ್‌ರಿಗೆ ನೀಡುತ್ತಾರೆ.

**4. ಪಂಪ ಭಾರತ – ಪಂಪ:**

ಕನ್ನಡದ ಆದಿಕವಿ ಪಂಪ, ಹೆಮ್ಮೆಯ ಕವಿ ಪಂಪನನ್ನು ಸಾಹಿತ್ಯಲೋಕಕ್ಕೆ ಮೊದಲ ಪರಿಚಯ ಮಾಡಿಸಿದ ಹೆಗ್ಗಳಿಕೆ ಕೂಡ ಬಿ.ಎಲ್.ರೈಸ್‌ರಿಗೆ ಸಲ್ಲುತ್ತದೆ. ಈ ಕೃತಿಯನ್ನು ಸಂಪಾದನೆ ಮೊದಲು ಬಿ.ಎಲ್.ರೈಸ್‌ರು ತುಂಬಾ ಕಷ್ಟಪಡುತ್ತಾರೆ. ಇವರಿಗೆ ಈ ಕೃತಿಯ ಯಾವುದೇ ಹಸ್ತ ಪ್ರತಿಗಳು ದೊರತಿರುವುದಿಲ್ಲ, ಕೇವಲ ಎರಡೇ ಎರಡು ಅಪೂರ್ಣ ಹಸ್ತಪ್ರತಿಗಳು ಮತ್ತು ಉಪಲಬ್ಧವಾದ ತಾಡೋಲೆಗಳಿಂದಲೇ ಗ್ರಂಥ ಸಂಪಾದನೆ ಮಾಡಿ ಕನ್ನಡ ಸಾಹಿತ್ಯಕ್ಕೆ ಒಂದು ಶ್ರೇಷ್ಠ ಕಾವ್ಯದ ಕಾಣಿಕೆಯನ್ನು ನೀಡುತ್ತಾರೆ. ಇವರ ಈ ಕೃತಿಯ ಸಂಪಾದನೆ ಬಗ್ಗೆ – "ಬೆಂಜಮಿನ್ ಲೂಯಿ ರೈಸ್‌ರೆಂದರೆ ವಿಸ್ಮೃತಿಯ ಸಾಗರಾಳದಿಂದ ಪಂಪನನ್ನು, ಪಂಪ ಕಾವ್ಯ ವಸುಂಧರೆಯನ್ನು ಎತ್ತಿ ತಂದ ವರಾಹಮೂರ್ತಿ. ಬೆಂಜಮಿನ್ ಲೂಯಿ ರೈಸ್‌ರೆಂದರೆ ಅಭಿನವ ಹನುಮಂತ–ಆತನು ಹೊತ್ತು ತಂದ ಸಂಜೀವಿನಿ ಪರ್ವತದಲ್ಲಿ ಸಿಕ್ಕಿದ ಅನರ್ಘ್ಯ ಮಾಲಿಕೆ"4. ಎಂದು ಎಲ್.ಬಸವರಾಜರು ಬಿ.ಎಲ್ ರೈಸ್‌ರನ್ನು ಹೊಗಳಿ ಕೊಂಡಾಡುತ್ತಾರೆ. ಈ ಹೊಗಳಿಕೆಗೆ ಬಿ.ಎಲ್.ರೈಸ್‌ರು ಖಂಡಿತಾ ಅರ್ಹರಾಗಿದ್ದಾರೆ.

ನಂತರ ಈ ಕೃತಿಯನ್ನು ಟಿ.ಎಸ್.ವೆಂಕಣ್ಣಯ್ಯ, ಕಡಬದ ನಂಜುಂಡ ಶಾಸ್ತ್ರಗಳು ಮತ್ತು ಬೆಳ್ಳಾವೆ ವೆಂಕಟನಾರಾಯಣಪ್ಪನವರು ಪರಿಷ್ಕರಿಸುತ್ತಾರೆ.

ಬಿ.ಎಲ್.ರೈಸ್‌ರು "ಸುಮಾರು 300 ಜನ ಕವಿಗಳನ್ನು ನಮಗೆ ಪರಿಚಯಿಸಿ ಕೊಟ್ಟಿದ್ದಾರೆ"5. ಎಂದು ಶ್ರೀನಿವಾಸ ಹಾವನೂರರು ಅಭಿಪ್ರಾಯ ಪಡುತ್ತಾರೆ.

ಇವರ ನಂತರ ಹಳೆಗನ್ನಡದ ಹಸ್ತ ಪ್ರತಿಗಳನ್ನು ಹುಡುಕುವ, ಸಂಪಾದಿಸಿ ಪ್ರಕಟಿಸುವ ತರಬೇತಿಯನ್ನು ಬಿ.ಎಲ್.ರೈಸ್‌ರು ಆರ್.ನರಸಿಂಹಾಚಾರ್ಯರಿಗೆ ನೀಡಿರುತ್ತಾರೆ. ಬಿ.ಎಲ್.ರೈಸ್‌ರ ದಾರಿಯಲ್ಲಿಯೆ ಸಾಗಿದ ಆರ್.ನರಸಿಂಹಾಚಾರ್ಯರು ಸುಮಾರು 1200 ಜನ ಪ್ರಾಚೀನ ಕವಿಗಳನ್ನು ಪರಿಚಯ ಮಾಡಿಕೊಡುತ್ತಾರೆ. ಈ ಎಲ್ಲ ವಿವರಗಳನ್ನು "ಕರ್ನಾಟಕ ಕವಿ ಚರಿತ" ಎಂಬ ದೊಡ್ಡ ಮೂರು ಸಂಪುಟಗಳಲ್ಲಿ ದಾಖಲಿಸಿದ್ದಾರೆ. ಇದು ಕೂಡ ಕನ್ನಡ ಸಾಹಿತ್ಯ ಇತಿಹಾಸಕ್ಕೆ ಬಹುದೊಡ್ಡ ಕೊಡುಗೆಯಾಗಿದೆ.

**ಗೆಜೆಟಿಯರ್ ಪ್ರವರ್ತಕ – ಬಿ.ಎಲ್.ರೈಸ್**

ಗೆಜೆಟಿಯರ್ ಎಂದರೆ ಒಂದು ಪ್ರದೇಶದ ಸಾಮಾಜಿಕ, ಸಾಂಸ್ಕೃತಿಕ, ಚಾರಿತ್ರಿಕ, ಆಡಳಿತಾತ್ಮಕ, ಧಾರ್ಮಿಕ ಮತ್ತು ಔದ್ಯಮಿಕ ವಿವರಗಳನ್ನು ಒಳಗೊಂಡಿರುವಂತದ್ದು. ಇಂತಹ ಗೆಜೆಟಿಯರ್ ರಚನೆಯನ್ನು ಮೊದಲಿಗೆ ತಯಾರಿಸಿದ್ದು ಕೂಡ ಬಿ.ಎಲ್. ರೈಸ್‌ರೇ ಆದರೆ ಅವರ ಈ ಕೆಲಸ ಅಷ್ಟು ಸುಲಭವಾಗಿರಲಿಲ್ಲ ಆ ಕಾಲದಲ್ಲಿ ಎಲ್ಲ ಮಾಹಿತಿಗಳು ಸರ್ಕಾರಿ ಕಛೇರಿಗಳಲ್ಲಿ ಸಿಗುತ್ತಿರಲಿಲ್ಲ. ಆದರೂ ಬಿ.ಎಲ್.ರೈಸ್‌ರು ಶ್ರಮವಹಿಸಿ "ಮೈಸೂರು ಎಂಡ್ ಕೂರ್ಗ್–ಎ ಗೆಜೆಟಿಯರ್" ಎಂಬ ಮೂರು ಸಂಪುಟಗಳನ್ನು ರಚಿಸುತ್ತಾರೆ. ಇದಕ್ಕಾಗಿ ಅವರು ಎರಡು ವರ್ಷ ಕಠಿಣ ಶ್ರಮವಹಿಸಿ ದುಡಿಯುತ್ತಾರೆ.

ಈ ಮೂರು ಸಂಪುಟಗಳಲ್ಲಿ ಮೊದಲನೆಯದು ಮೈಸೂರು ಚಿತ್ರಣ, ಎರಡನೇಯದು ಜಿಲ್ಲಾವಾರು ಮಾಹಿತಿ ಮತ್ತು ಮೂರನೇಯ ಸಂಪುಟ ಕೊಡಗನ್ನು ಕುರಿತಾದ್ದಾಗಿದೆ. ಮತ್ತು ಈ ಎಲ್ಲ ವಿವರಗಳು ಇಂಗ್ಲೀಷ್‌ನಲ್ಲಿದ್ದು ಕನ್ನಡೇತರರು ಕೂಡ ಮೈಸೂರು ಮತ್ತು ಕೊಡಗಿನ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಬಹುದಾಗಿದೆ. ಇದರಿಂದಾಗಿ ಕರ್ನಾಟಕದ ಕೀರ್ತಿ ಇನ್ನಷ್ಟು ಹರಡಲು ಈ ಗೆಜೆಟಿಯರ್ ಬಲು ಉಪಯುಕ್ತವಾಗಿದೆ.

ಇವುಗಳಲ್ಲದೆ ಬಿ.ಎಲ್.ರೈಸ್‌ರು ಇನ್ನು ಹಲವಾರು ಲೇಖನಗಳನ್ನು ಕೃತಿಗಳನ್ನು ಪ್ರಕಟಿಸಿದ್ದಾರೆ. ಹೀಗೆ ಕನ್ನಡ ನಾಡಿಗೆ, ಸಾಹಿತ್ಯಕ್ಕೆ, ಇತಿಹಾಸಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟಂತಹ ಕನ್ನಡ ನಾಡನ್ನು ಸಮೃದ್ಧವಾಗಿ ಕಟ್ಟಲು ಮೂಲ ಇಟ್ಟಿಗೆಗಳನ್ನು ಹುಡುಕಿ ತೆಗೆದು ಅವುಗಳನ್ನು ಜೋಡಿಸಿದ ಕೀರ್ತಿ ಬಿ.ಎಲ್.ರೈಸ್‌ರದು. ಅವರ ಈ ಶ್ರಮಕ್ಕೆ, ತ್ಯಾಗಕ್ಕೆ ವಿದ್ವತ್ತಿಗೆ ಕನ್ನಡಿಗರೆಲ್ಲರ ಪೂರ್ಣ ನಮನ. ಕನ್ನಡ ಇರುವವರೆಗೂ ಬಿ.ಎಲ್.ರೈಸ್‌ರ ಹೆಸರೂ ಕೂಡ ಅಮರವಾಗಿರುತ್ತದೆ. ಅದೇ ರೀತಿ ಅವರ ಕನ್ನಡ ಪ್ರೇಮ ಕೂಡ ಅನರ್ಘ್ಯವಾದದು. ಆದ್ದರಿಂದಲೇ ಸುಪ್ರಸಿದ್ದ ಸಾಹಿತಿಗಳಾದ ಎ.ಆರ್.ಕೃಷ್ಣಶಾಸ್ತ್ರೀಗಳ ಮಾತಿನಲ್ಲಿ ಹೇಳುವುದಾದರೆ "ಕನ್ನಡ ನಾಡಿನಲ್ಲಿಯೆ ಹುಟ್ಟಿ ಬೆಳೆದು ಅದರ ಉಪ್ಪನ್ನು ಮಣಗಟ್ಟಲೆ ತಿಂದವನೂ ಕನ್ನಡ ದೇಶಕ್ಕೆ ಇಷ್ಟು ಉಪಕಾರ ಮಾಡಿರುವುದು ಅಪರೂಪ"6. ಎಂಬ ಮಾತು ನಿಜಕ್ಕೂ ಸತ್ಯವಾಗಿದೆ.

**ಕೊನೆ ಟಿಪ್ಪಣಿಗಳು**

1. ಡಾ. ಶ್ರೀನಿವಾಸ ಹಾವನೂರ – ಹೊಸಗನ್ನಡದ ಅರುಣೋದಯ – ಪು.ಸಂ.135.
2. ಅದೇ – ಪು.ಸಂ.146.
3. ಡಾ.ಎಸ್.ಎಲ್.ಶ್ರೀನಿವಾಸಮೂರ್ತಿ – "ಪುರಾತತ್ವ ಪಿತಾಮಹ ಬಿ.ಎಲ್.ರೈಸ್  ಜೀವನ ಸಾಧನೆ – ಪು.ಸಂ.145
4. ಅದೇ – ಪು.ಸಂ.277.
5. ಡಾ. ಶ್ರೀನಿವಾಸ ಹಾವನೂರ – ಶಾಸನ ಪಿತಾಮಹ ಬಿ.ಎಲ್.ರೈಸ್. ಪು.ಸಂ.24.
6. ಅದೇ – ಪು.ಸಂ.47.

**ಪರಾಮರ್ಶನ ಗ್ರಂಥಗಳು**

1. ಡಾ.ಶ್ರೀನಿವಾಸ ಹಾವನೂರ – ಹೊಸಗನ್ನಡದ ಅರುಣೋದಯ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮೂರನೆಯ ಮುದ್ರಣ, 2011.
2. ಡಾ.ಶ್ರೀನಿವಾಸ ಹಾವನೂರ 0020 – ಶಾಸನ ಪಿತಾಮಹ ಬಿ.ಎಲ್.ರೈಸ್, ಐ.ಬಿ.ಎಚ್ ಪ್ರಕಾಶನ, ಗಾಂಧೀನಗರ – ಬೆಂಗಳೂರು.
3. ಡಾ. ಶ್ರೀನಿವಾಸ ಮೂರ್ತಿ.ಎಸ್.ಎಲ್ – ಪುರಾತತ್ವ ಪಿತಾಮಹ ಬಿ.ಎಲ್.ರೈಸ್ ಜೀವನ, ಸಾಧನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಮೊದಲ ಮುದ್ರಣ, 2011.